# ಗುರುಪೂರ್ಣಿಮೆಯ ಮಹತ್ವ

**ಸದಾನಂದ ಸ್ವಾಮಿ**

‘ಗುರುಪೂರ್ಣಿಮೆ’ಯೆಂಬುದು ಭಾರತದಲ್ಲಿ ವಿವಿಧ ಸಂಪ್ರದಾಯಗಳಲ್ಲಿ, ವಿವಿಧ ಪರಂಪರೆಗಳಲ್ಲಿ ಗುರುವನ್ನು ಆರಾಧಿಸುವ ಒಂದು ಪವಿತ್ರ ದಿನವಾಗಿದೆ. ಈ ದಿನದಂದು ತಮ್ಮ ತಮ್ಮ ಗುರುವನ್ನು ಹಾಗೂ ಗುರುಪರಂಪರೆಯನ್ನು ಪೂಜಿಸುವುದು ಭಾರತದೆಲ್ಲೆಡೆ ಕಂಡುಬರುತ್ತದೆ. ಗುರುವನ್ನು ಹೇಗೆ ಆರಾಧಿಸುತ್ತಾರೆ? ಅಥವಾ ಯಾವ ರೀತಿ ಆರಾಧಿಸಬೇಕು? ಈ ವಿಚಾರದಲ್ಲಿ ಏಕರೂಪತೆ ಕಂಡುಬರದಿದ್ದರೂ, ಗುರು ಜೀವಂತವಾಗಿದ್ದರೆ ಅವರನ್ನು ನೇರವಾಗಿ ನಮಸ್ಕರಿಸಿ, ಪುಷ್ಪಾಂಜಲಿ, ಹಣ್ಣುಹಂಪಲುಗಳ ಸಮರ್ಪಣೆ ಮಾಡಿ, ಭಕ್ತಿಯಿಂದ ಅವರಿಗೆ ಕಾಣಿಕೆ ನೀಡುವುದು, ಬಳಿಕ ಅವರ ಅನುಗ್ರಹ ಹಾಗೂ ಉಪದೇಶಗಳನ್ನು ಆಲಿಸುವುದು ಸರ್ವೇಸಾಮಾನ್ಯ. ಹಲವು ಸಂಪ್ರದಾಯಗಳಲ್ಲಿ ಮೂಲಪುರುಷನು ಒಬ್ಬ ಋಷಿ, ಒಬ್ಬ ಮಹಾತ್ಮ ಅಥವಾ ದೇವತೆಯಾಗಿದ್ದು, ಅವರ ಸ್ಮಾರಕ ಮಂದಿರದಲ್ಲೋ, ದೇವಾಲಯದಲ್ಲೋ ವಿಶೇಷ ಪೂಜೆ, ಆಚರಣೆಗಳೊಂದಿಗೆ ಗುರುಪೂರ್ಣಿಮೆಯನ್ನು ಆಚರಿಸಲಾಗುತ್ತದೆ. ಒಟ್ಟಿನಲ್ಲಿ ಅಜ್ಞಾನದ ಅಂಧಕಾರವನ್ನು ನೀಗಿಸುವ ಗುರುವನ್ನು ಅತ್ಯುನ್ನತ ಸ್ಥಾನದಲ್ಲಿಟ್ಟಿರುವುದು ನಮ್ಮ ಸಂಸ್ಕೃತಿಯ ವಿಶೇಷತೆ.

ಗುರುಪೂರ್ಣಿಮೆಯನ್ನು **‘ವ್ಯಾಸಪೂರ್ಣಿಮೆ’** ಎಂದೂ ಕರೆಯುವುದಿದೆ. ವ್ಯಾಸಮಹರ್ಷಿಯು ವೇದಗಳನ್ನು ವಿಂಗಡಿಸಿದವರು, ಬ್ರಹ್ಮಸೂತ್ರಗಳನ್ನು ರಚಿಸಿದವರು, ಮಹಾಭಾರತ ಹಾಗೂ ಹಲವಾರು ಪುರಾಣಗಳನ್ನು ಬರೆದವರು; ನಮ್ಮ ಪರಂಪರೆಯಲ್ಲಿ ಸರ್ವರಿಗೂ ಮಾನ್ಯರು ಹಾಗೂ ಪೂಜ್ಯರು. ಅವರನ್ನು ಗುರುವೆಂದು ಪರಿಗಣಿಸಿ ಪೂಜಿಸುವುದರಿಂದಲೇ ಗುರುಪೂರ್ಣಿಮೆಗೆ ‘ವ್ಯಾಸಪೂರ್ಣಿಮೆ’ ಎಂದೂ ಕರೆಯುತ್ತಾರೆ.

ಗುರು ಎಂದು ಯಾರನ್ನು ಕರೆಯಬೇಕು? ಅಕ್ಷರ ಕಲಿಸಿದ ಅಧ್ಯಾಪಕನೂ ಗುರು; ಮಾತು ಕಲಿಸಿದ ತಾಯ್ತಂದೆಯರೂ ಗುರು; ಹೆಜ್ಜೆಹೆಜ್ಜೆಗೂ ಜೀವನದ ಪಾಠಗಳನ್ನು ಕಲಿಸಿದ ಹೆತ್ತವರು, ಅಣ್ಣ-ಅಕ್ಕ, ಮಾವ-ಚಿಕ್ಕಪ್ಪ-ಅತ್ತೆ-ಅಜ್ಜ-ಅಜ್ಜಿ ಮೊದಲಾದ ಹಿರಿಯರೆಲ್ಲರೂ ಗುರುಗಳೇ. ಇನ್ನು ವಿಶೇಷ ವ್ಯಾಸಂಗ ಮಾಡುವಾಗ ಪಾಠ ಕಲಿಸಿದ ಅಧ್ಯಾಪಕರೆಲ್ಲರೂ ಗುರುಗಳೇ. ನಾವು ಏನನ್ನಾದರೂ ಇತರರಿಂದ ಕಲಿತಿದ್ದರೆ, ಕಲಿಸಿದವರೆಲ್ಲರೂ ಗುರುಗಳೇ. ಹೀಗೆ ನೋಡುವಾಗ ನಮ್ಮ ಜೀವನದಲ್ಲಿ ಹತ್ತಾರು, ನೂರಾರು ಮಂದಿ ಗುರುಗಳು ಇರಬಹುದಲ್ಲವೆ? ಹೌದು, ಇರಬಹುದು. ಇಂಥ ಸಂದರ್ಭದಲ್ಲಿ ಯಾರನ್ನು ಗುರುವೆಂದು ಪರಿಗಣಿಸಬೇಕು? ಯಾರನ್ನು ಆರಾಧಿಸಬೇಕು? — ಹಲವರಿಗೆ ವಿಷಯದಲ್ಲಿ ಈ ಗೊಂದಲವುಂಟಾಗಬಹುದು. ಅದಕ್ಕೆ ಅತ್ಯುತ್ತಮ ಪರಿಹಾರವೆಂದರೆ, ಶ್ರೀರಾಮಕೃಷ್ಣರು ಹೇಳಿದ ವಿಚಾರ: ‘ಸಚ್ಚಿದಾನಂದನೊಬ್ಬನೇ ಗುರು. ಉಳಿದವರೆಲ್ಲರೂ ಅದೇ ಗುರುವಿನ ಆವಿರ್ಭಾವಗಳು. ಉಪಗುರುಗಳು ಹಲವರಿರಬಹುದು, ಆದರೆ ಅಂತಿಮವಾಗಿ ಗುರು ಒಬ್ಬನೇ’. ಅಜ್ಞಾನ ತೊಲಗಿ ಹೋದಾಗ ಮಾನವನಿಗೆ ಹೊಸ ತಿಳಿವಳಿಕೆ ಮೂಡಿ ಬರುತ್ತದೆ; ಹೊಸ ಪ್ರಪಂಚ ತೆರೆದಂತಾಗುತ್ತದೆ. ಹೀಗೆ ಬೆಳಕು ಮೂಡಲು ಗುರು ಹೇಳಿಕೊಟ್ಟದಲ್ಲದೆ ಬೇರೆ ದಾರಿಯಿಲ್ಲ. ಶಿಷ್ಯನ ಅಜ್ಞಾನವನ್ನು ಕಂಡು, ಅವನ ಮೇಲೆ ಅಪಾರ ಕರುಣೆಯಿಂದ ಕೃಪೆಯನ್ನು ಹರಿಸಿ, ಅವನ ಅಂಧಕಾರವನ್ನು ಓಡಿಸುತ್ತಾನೆ ಗುರು. ಅದ್ದರಿಂದ ಗುರುವಿಗಿಂತ ಹೆಚ್ಚಿನವನು ಬೇರೆ ಯಾರೂ ಇಲ್ಲ. ತಂದೆ ತಾಯಿಗಳಿಗಿಂತಲೂ, ಬಂಧುಗಳಿಗಿಂತಲೂ ಹೆಚ್ಚಿನವನೇ ಗುರು. ಆದ್ದರಿಂದಲೇ ಶಿಷ್ಯನು ಗುರುವನ್ನು ‘**ಗುರುಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ । ಗುರುರೇವ ಪರಂಬ್ರಹ್ಮ ತಸ್ಮೈ ಶ್ರೀಗುರವೇ ನಮಃ**’ ಎಂದು ಸ್ತುತಿಸುತ್ತಾನೆ.

ಗುರುವಿನ ಆರಾಧನೆ ಅತ್ಯಂತ ಪ್ರಾಚೀನವೆಂಬ ವಿಚಾರ ವೇದ, ಉಪನಿಷತ್ತುಗಳಿಂದ ತಿಳಿದುಬರುತ್ತದೆ. ಶಿಷ್ಯನು ಗುರುವಿನ ಬಳಿಗೆ ಹೋಗಿ ಆತ್ಮಸಮರ್ಪಣೆ ಮಾಡುವ ವಿಚಾರ, ಗುರುವೇ ಸಾಕ್ಷಾತ್ ಪರಮಾತ್ಮನ ಆವಿರ್ಭಾವವೆಂದೇ ಪರಿಗಣಿಸುವ ಸಂಗತಿ ಪರಂಪರೆಯ ಉದ್ದಕ್ಕೂ ಹಲವು ಕಥೆಗಳಲ್ಲಿ ಕಂಡುಬರುತ್ತದೆ. ಅಂತೆಯೇ ಗುರುವಾದವರು ಕೂಡ ಶಿಷ್ಯನ ಮೇಲೆ ಅಷ್ಟೇ ಪ್ರೀತಿ, ಮಮತೆ, ಆತ್ಮೀಯತೆಗಳನ್ನು ಹೊಂದಿದ್ದರೆಂಬುದು ವಿಶೇಷವಾಗಿ ಕಂಡುಬರುವ ವಿಚಾರ. ಸಾಂದೀಪನಿ ಮಹರ್ಷಿಗಳು ತಮ್ಮ ಶಿಷ್ಯಂದಿರು ಸಾಯಂಕಾಲ ಮನೆಗೆ ಮರಳದೆ ಹೋದಾಗ, ಅವರನ್ನು ಹುಡುಕುತ್ತ ಕಾಡಿಗೆ ಹೋದರೆಂದೂ, ಕತ್ತಲಾದರೂ ಅವರು ಕಾಣಿಸದೆ ಹೋದಾಗ ಅತ್ಯಂತ ವ್ಯಾಕುಲಗೊಂಡರೆಂದೂ ಒಂದು ಕಥೆ ತಿಳಿಸುತ್ತದೆ. ಇನ್ನು ಪರಶುರಾಮನ ಕಥೆಯಲ್ಲಿ ಗುರುವಿನ ನಿದ್ರೆಗೆ ಭಂಗವುಂಟಾಗಬಾರದೆಂದು, ತನ್ನ ತೊಡೆಯನ್ನೇ ಭೃಂಗವೊಂದು ಕೊರೆದು ತಿನ್ನುತ್ತಿದ್ದರೂ ಲೆಕ್ಕಿಸದೆ ತಡೆದುಕೊಂಡಿದ್ದ ಕರ್ಣನ ಗುರುಭಕ್ತಿ ಜಗತ್ಪ್ರಸಿದ್ಧ. ದ್ರೋಣರ ಪರೋಕ್ಷ ಶಿಷ್ಯನಾಗಿದ್ದರೂ, ಗುರುದಕ್ಷಿಣೆಯಾಗಿ ತನ್ನ ಹೆಬ್ಬೆರಳನ್ನೇ ಕತ್ತರಿಸಿಕೊಟ್ಟ ಏಕಲವ್ಯನ ತ್ಯಾಗಕ್ಕೆ ಸರಿಸಾಟಿಯಿಲ್ಲ. ಇಂಥ ಕಥೆಗಳು ನಮ್ಮ ಪರಂಪರೆಯಲ್ಲಿ ಗುರುಭಕ್ತಿಯ ಮಹಿಮೆಯನ್ನು, ಗುರುವಿನ ಸ್ಥಾನ ಎಷ್ಟು ಉನ್ನತವಾದುದು ಎಂಬುದನ್ನು ತಿಳಿಸಿಕೊಡುತ್ತವೆ.

ಆಧ್ಯಾತ್ಮಿಕ ಕ್ಷೇತ್ರದಲ್ಲಿ ಗುರುವಿಗೆ ವಿಶೇಷ ಸ್ಥಾನವಿದೆ. ಉಳಿದೆಲ್ಲ ವಿದ್ಯೆಗಳಿಗೂ ಪರಮ ವಿದ್ಯೆಯೇ ಅಧ್ಯಾತ್ಮವಿದ್ಯೆ. ‘ಯಾವುದನ್ನು ತಿಳಿದರೆ ಉಳಿದವೆಲ್ಲವನ್ನೂ ತಿಳಿದಂತಾಗುವುದೋ’ ಅದೇ ಪರಾವಿದ್ಯೆ. ಅದನ್ನು ತಿಳಿಸಿಕೊಡುವ ಗುರು ಕೂಡಾ ಸಾಮಾನ್ಯನಲ್ಲ; ಅವನು ಪರಬ್ರಹ್ಮನ ಸಾಕ್ಷಾತ್ಕಾರ ಪಡೆದು ಪರಬ್ರಹ್ಮವೇ ಆದವನು. ಆದ್ದರಿಂದ ಶಿಷ್ಯನು ಗುರುವಿನಲ್ಲಿ ಪರಿಪೂರ್ಣತೆಯನ್ನು ಕಾಣುತ್ತಾನೆ; ಪರಬ್ರಹ್ಮನೇ ಗುರುವಿನ ರೂಪದಲ್ಲಿ ತನ್ನೆದುರು ಜೀವಂತವಾಗಿ ಮೈದೋರಿ ಬಂದಿದ್ದಾನೆ ಎಂದು ಶ್ರದ್ಧೆಯಿಂದ ತಿಳಿದುಕೊಳ್ಳುತ್ತಾನೆ. ಹೀಗೆ ಅತಿಶ್ರೇಷ್ಠ ಗುರು, ಅತ್ಯಂತ ಯೋಗ್ಯನಾದ ಶಿಷ್ಯ-ಇವರಿಬ್ಬರ ಸಮಾಗಮದಿಂದಲೇ ಬ್ರಹ್ಮವಿದ್ಯೆ ಅಭಿವ್ಯಕ್ತವಾಗುವುದು. ಗುರು ಕೊಟ್ಟ ಉಪದೇಶವನ್ನು ಶಿಷ್ಯನು ಚಾಚೂ ತಪ್ಪದೆ ಪಾಲಿಸುವನು; ಗುರು ಬಯಸಿದಲ್ಲಿ ಶಿಷ್ಯನು ಪ್ರಾಣತ್ಯಾಗಕ್ಕೂ ಹಿಂಜರಿಯಲಾರನು. ಇದು ಶಿಷ್ಯನು ಹೊಂದಿರಬೇಕಾದ ನಿಷ್ಠೆ. ಈ ರೀತಿ ಅನುಪಮವಾದ ಗುರುಭಕ್ತಿಯ ದ್ಯೋತಕವೇ ‘ಗುರುಪೂರ್ಣಿಮೆ’.